KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ಪತ್ರಿಕೆ**



| ಭಾಗ – I | ಬೆಂಗಳೂರು, ಮಂಗಳವಾರ, ಜನವರಿ ೨೭, ೨೦೦೯ (ಮಾಘ ೭, ಶಕ ವರ್ಷ ೧೯೩೦) | ನಂ. ೪೬ |
|---|---|---|



## ಕರ್ನಾಟಕ ಸರ್ಕಾರದ ನಡವಳಿಗಳು

## ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ಮಹಾಯೋಜನೆ 2021ನ್ನು (Master Plan) ಅಂತಿಮಗೊಳಿಸಿ ಆದೇಶಿಸುವ ಬಗ್ಗೆ (BIAAPA)

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ UDD 248 ಬೆಂರೂಪ್ರಾ 2003 ದಿ. 13.09.2004, ತಿದ್ದುಪಡಿ ಆದೇಶ ದಿನಾಂಕ: 17.09.2004.
2. ಅಧಿಸೂಚನೆ ಸಂಖ್ಯೆ: ನಅಇ 248 ಬೆಂರೂಪ್ರಾ 2003 ದಿ: 17.11.2004.
3. ಮಹಾನಗರ ಆಯುಕ್ತರು, BMRDA ಮತ್ತು ಅಧ್ಯಕ್ಷರು, BIAAPA ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: BIAAPA/ODP/87/2003–04 ದಿನಾಂಕ: 18.01.2006 ಮತ್ತು ದಿನಾಂಕ: 30.12.2006.
4. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರ ಪತ್ರದ ಸಂಖ್ಯೆ: BMRDA/BIAAPA/ Master Plan/2006–07 ದಿನಾಂಕ: 10.03.2008.
5. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರ ಪತ್ರದ ಸಂಖ್ಯೆ: BMRDA/BIAAPA/ Master Plan/2005–06 ದಿನಾಂಕ: 15/16–01–2009.
6. ಸರ್ಕಾರಿ ಪತ್ರ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 22.06.2006, 25.05.2007, 09.04.2008, 11.11.2008 ಮತ್ತು 07.01.2009.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದ ದಿನಾಂಕ: 13.09.2004ರ ತಿದ್ದುಪಡಿ ಆದೇಶ ದಿನಾಂಕ: 17.09.2004ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 13(1)ರನ್ವಯ ಸರ್ಕಾರವು, ಬೆಂಗಳೂರು ಅಂತಾರಾಷ್ಟ್ರೀಯ

ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ತಾತ್ಕಾಲಿಕ ಮಹಾಯೋಜನೆಗೆ ಅನುಮೋದನೆಯನ್ನು ನೀಡಿ, ಸ್ಥೂಲಾಭಿವೃದ್ಧಿ ಯೋಜನೆಯನ್ನು (ODP) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಸೆಕ್ಷನ್ 13(1)ರನ್ವಯ ಮಾಹಿತಿಗೋಸ್ಕರ ಪ್ರಕಟಿಸಿ, ಸಾರ್ವಜನಿಕರಿಂದ ಅಭಿಪ್ರಾಯ ಮತ್ತು ಸಲಹೆಗಳನ್ನು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿತ್ತು. ನಂತರ ಉಲ್ಲೇಖ(2)ರ ಅಧಿಸೂಚನೆ ದಿನಾಂಕ: 17.11.2004ರಲ್ಲಿ ಸರ್ಕಾರವು ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸುವ ದಿನಾಂಕವನ್ನು 31.12.2004ರವರೆಗೂ ವಿಸ್ತರಿಸಿ ಆದೇಶಿಸಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ: 18.01.2006ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಮತ್ತು ಅಧ್ಯಕ್ಷರು ಬಿಐಎಪಿಎ ಇವರು ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶದನ್ವಯ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ತಾತ್ಕಾಲಿಕ ಮಹಾಯೋಜನೆಯನ್ನು ದಿನಾಂಕ: 22.09.2004 ರಾಜ್ಯಪತ್ರದಲ್ಲಿ ಪ್ರಕಟಿಸಿ, ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸ್ವೀಕರಿಸಲಾಗಿತ್ತೆಂದು, ಸದರಿ ಸ್ಥೂಲಾಭಿವೃದ್ಧಿ ಯೋಜನಾ ಬಗ್ಗೆ ಒಟ್ಟು 1816 ಆಕ್ಷೇಪಣೆಗಳು ಸ್ಥೂಲಾಭಿವೃದ್ಧಿ ಯೋಜನೆಯ ಬಗ್ಗೆ (ಈಗ ಮಹಾಯೋಜನೆ ಎಂದು ಕರೆಯಲಾಗುತ್ತದೆ) ಸ್ವೀಕರಿಸಿದ್ದು, ಸ್ವೀಕರಿಸಿರುವ ಆಕ್ಷೇಪಣೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿತ್ತು :-

(1) ಸ್ಥೂಲಾಭಿವೃದ್ಧಿ ಯೋಜನೆಯನ್ನು ತಾತ್ಕಾಲಿಕವಾಗಿ ಅನುಮೋದನೆ ನೀಡುವ ಮೊದಲು ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಪರಿವರ್ತಿಸಿರುವ ಅಥವಾ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಅಥವಾ ನಿರಾಕ್ಷೇಪಣಾ ಪತ್ರ ಹೊರಡಿಸಿರುವ ಪ್ರಕರಣಗಳು (ಒಟ್ಟು 125 ಪ್ರಕರಣಗಳು).

(2) ಕೃಷಿಯೇತರ ಉದ್ದೇಶಕ್ಕಾಗಿ ಭೂಮಿ ಪರಿವರ್ತನೆಗೊಂಡಿಲ್ಲದಿರುವ ಪ್ರಕರಣಗಳು (ಒಟ್ಟು 1647 ಪ್ರಕರಣಗಳು).

(3) ಸ್ಥೂಲಾಭಿವೃದ್ಧಿ ಯೋಜನೆ ತಾತ್ಕಾಲಿಕ ಅನುಮೋದಿತವಾದ ನಂತರ ಮೊದಲು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಪ್ರಕರಣಗಳು (ಒಟ್ಟು 44 ಪ್ರಕರಣಗಳು).

ಮುಂದುವರಿದು, ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರು ಸ್ಥೂಲಾಭಿವೃದ್ಧಿ ಯೋಜನೆಯ ಬಗ್ಗೆ ಸ್ವೀಕರಿಸಿರುವ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಎಲ್ಲಾ ಬದಲಾವಣೆಗಳನ್ನು ಮಹಾಯೋಜನೆಯಲ್ಲಿ ಸೇರಿಸಿದೆ ಎಂದು ವರದಿ ಮಾಡಿ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ: 10.03.2008ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ಇವರು ಸರ್ಕಾರ ವಿವಿಧ ಪ್ರಾಧಿಕಾರಗಳಾದ BIAL, KIADB, KRDCL ಈ ಸಂಸ್ಥೆಗಳ ಬೇಡಿಕೆಗಳನ್ನು ಪರಿಶೀಲಿಸಿ ಆ ಪ್ರದೇಶಕ್ಕೆ ಬೇಕಾಗಿರುವ ಪ್ರಸ್ತಾವನೆಗಳನ್ನು ಮಹಾಯೋಜನೆಯಲ್ಲಿ ಅಳವಡಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ: 15/16-01-2009ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬಿಐಎಪಿಎ, ಇವರು ಅಂತಿಮ ಮಹಾಯೋಜನೆಯಲ್ಲಿ ದಿನಾಂಕ: 17.09.2004ರ ಮುನ್ನ ಅನ್ಯಕ್ರಾಂತ ಆಗಿರುವ ಒಟ್ಟು 1565 ಹೆಕ್ಟೇರ್ (3867 ಎಕರೆ) ಪ್ರದೇಶವನ್ನು ನಕ್ಷೆಯಲ್ಲಿ ಗುರುತಿಸಿ, ಸದರಿ ಪ್ರದೇಶವನ್ನು ಸಂರಕ್ಷಿಸಲಾಗಿದೆಯೆಂದು ಹಾಗೂ KIADBಯ ಒಟ್ಟು 1706.84 ಹೆಕ್ಟೇರ್ (4217 ಎಕರೆ) ಪ್ರದೇಶವನ್ನು ಸೇರಿಸಿ ಒಟ್ಟು 14,627.63 ಹೆಕ್ಟೇರ್ ಪ್ರದೇಶಕ್ಕೆ ಮಹಾಯೋಜನೆಯನ್ನು ಸೀಮಿತಗೊಳಿಸಲಾಗಿದೆ ಎಂದು, ಜೊತೆಗೆ ಮಹಾಯೋಜನೆಯಲ್ಲಿ

... STRR, IRR, TRR, RR ಮತ್ತು Expressway ರಸ್ತೆಗಳನ್ನು ಸಹ ಅಳವಡಿಸಲಾಗಿದೆ ಎಂದು ವರದಿ ಮಾಡಿ ...AAPA ಮಹಾಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡಲು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (6)ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಪ್ರಸ್ತಾಪಿತ ಮಹಾಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರದಿಂದ ಸಲಹೆ / ಸೂಚನೆ ನೀಡಲಾಗಿರುತ್ತದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ, ಕೇಂದ್ರೀಯ ಆಂತರಿಕ ಭದ್ರತಾ ವ್ಯವಸ್ಥೆ, ಮುಂತಾದ ಸಂಸ್ಥೆಗಳ ಸಿಬ್ಬಂದಿ ಮತ್ತಿತರೆ ವಿಭಾಗಗಳಿಗೆ ವಸತಿ ಅವಶ್ಯಕತೆಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಸುರಕ್ಷಿತ ನಿಬಂಧನೆಗಳಿಗೆ ಒಳಪಡಿಸಿ ವಿಶೇಷ ವ್ಯವಸಾಯ ವಲಯದಲ್ಲಿ ಅಭಿವೃದ್ಧಿಗಾಗಿ ಅನುವು ಮಾಡಿಕೊಡಲಾಗಿದೆ. ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ, ಇವುಗಳ ಮಧ್ಯೆ ನಡೆದಿರುವ ಒಪ್ಪಂದಗಳ ಪ್ರಕಾರ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವಿಮೋಚನೆಗೊಳಪಡಿಸಿ ಸಾಮಾನ್ಯ ಸಾರಿಗೆ ವಲಯದಿಂದ ನಿಬಂಧನೆರಹಿತಗೊಳಿಸಲು ವಿಮಾನ ನಿಲ್ದಾಣ ಪ್ರದೇಶವನ್ನು ``ವಿಮಾನ ನಿಲ್ದಾಣ ವಲಯ`` ವೆಂದು ಘೋಷಿಸಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರನ್ವಯ ಮಹಾಯೋಜನೆಯನ್ನು ತಯಾರಿಸಿದ್ದು, ಅದರಂತೆ ಭೂ ಉಪಯೋಗ ವಲಯಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವ ಸಂಬಂಧ, ಕಟ್ಟಡಗಳ ಸುತ್ತಮುತ್ತಲಿನ ನಡುಜಾಗಗಳು, ನಿವೇಶನ ಆವರಣ (Plot Coverage), ಅಂತಸ್ತಿನ ಅನುಪಾತ ಪ್ರದೇಶ (Floor Area Ratio), ಕಟ್ಟಡದ ಎತ್ತರ, ಕಟ್ಟಡ ರೇಖೆ (Building line), ವಾಹನ ನಿಲುಗಡೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಒಳಗೊಂಡಿರುವ ನೂತನ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬಿಐಎಪಿಎ ಇವರು ಸಲ್ಲಿಸಿರುವ ಅಂತಿಮ ಮಹಾಯೋಜನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ :-

**ಸರ್ಕಾರಿ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005**

**ಬೆಂಗಳೂರು. ದಿನಾಂಕ 27.01.2009**

ಪ್ರಸ್ತಾವನೆಯಲ್ಲಿ ಹೇಳಿರುವ ಅಂಶಗಳನ್ನು ಸರ್ಕಾರವು ಪರಿಶೀಲಿಸಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ಅಂತಿಮ ಮಹಾಯೋಜನೆ 2021ಕ್ಕೆ (ಮಾಸ್ಟರ್ ಪ್ಲ್ಯಾನ್) ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ಸೆಕ್ಷನ್ 13(3)ರನ್ವಯ ಸರ್ಕಾರ ಮಂಜೂರಾತಿ ನೀಡಿದೆ ಹಾಗೂ ಉದ್ದೇಶಿತ ಮಹಾಯೋಜನೆಗೆ ಭೂ ಉಪಯೋಗದ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:-

| Description | Total Area Conurbation Area-2021 (Hectares) | % Total Proposed-2021 |
|---|---|---|
| Residential | 7,284.34 | 49.80% |
| Commercial | 470.33 | 3.23% |

| Description | Total Area Conurbation Area-2021 (Hectares) | % Total Proposed-2021 |
|---|---|---|
| Industrial | 566.70 | 3.87% |
| Public & Semi Public | 731.94 | 5.00% |
| Park & Open Space | 1,841.89 | 12.59% |
| Airport Zone | 1,743.98 | 11.92% |
| Transportation | 1,982.61 | 13.55% |
| Public Utilities | 5.84 | 0.04% |
| Total Area Proposed | 14,627.63 | 100.0.0% |
| | | |
| 1. KIADB Area | 1,706.84 | |
| 2. Special Agricultural Zone | 1,800.52 | |
| 3. Water bodies | 5,669.09 | |
| 4. Agriculture | 55,395.92 | |
| Grand Total Area | 79,200.00 | |

2021ರ ಮಾಸ್ಟರ್ ಪ್ಲಾನ್‌ಗೆ ಸಂಬಂಧಿಸಿದ ವರದಿ ಹಾಗೂ ಭೂ ಉಪಯೋಗ ಯೋಜನೆಯ ಎಲ್ಲಾ ನಕ್ಷೆ ಮೇಲೆ ಸರ್ಕಾರದ ಮುದ್ರೆ ಹಾಗೂ ಸಹಿಯನ್ನು ಮಾಡಲಾಗಿದೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.